# ಗಜಕರ್ಣ ಏನಿದರ ಮರ್ಮ?



**ಗಜಕರ್ಣ ಎಂಬುದು ಒಂದು ರೀತಿಯ ಶಿಲೀಂಧ್ರ ಸೋಂಕು. ಚರ್ಮದ ಹೊರಭಾಗದಲ್ಲಿ ವೃತ್ತಾಕಾರದಲ್ಲಿ ಸಣ್ಣಸಣ್ಣ ಗುಳ್ಳೆಗಳ ಸಮೂಹ ಕಾಣಿಸಿಕೊಂಡು, ವಿಪರೀತ ಕಡಿತ ಉಂಟಾಗುತ್ತದೆ.**
**ಮನೆಮದ್ದುಗಳಿಂದಲೇ ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು. ರಿಂಗ್‌ವರ್ಮ್ ಎಂಬ ಹೆಸರು ಇದಕ್ಕಿದ್ದರೂ, ಇದು ಜಂತು ಅಥವಾ ಹುಳುವಿನಿಂದ ಬರುವ ಕಾಯಿಲೆಯಲ್ಲ.**

**■ ಡಾ. ವಸುಂಧರಾ ಭೂಪತಿ**

‘ಡಾಕ್ಟ್ರೇ, ನನ್ನ ಮಗನಿಗೆ ಚರ್ಮದ ಮೇಲೆ ಸಣ್ಣ ಸಣ್ಣ ಗುಳ್ಳೆಗಳಾಗಿವೆ. ತುಂಬ ನವೆ ಇದೆ. ಇದಕ್ಕೇನು ಮಾಡುವುದು?’

‘ಡಾಕ್ಟ್ರೇ, ನನಗೆ ಕಂಕುಳಲ್ಲಿ ಮತ್ತು ತೊಡೆಸಂದಿಯಲ್ಲಿ ಕೆಂಪಗೆ ನಾಣ್ಯದ ಆಕಾರದಲ್ಲಿ ಗುಳ್ಳೆಗಳಾಗಿವೆ. ಇದೇನು ಎಂದು ಗೊತ್ತಾಗುತ್ತಿಲ್ಲ. ವಾಸಿಯಾಗುತ್ತಿಲ್ಲ. ಪದೇ ಪದೇ ಬರುತ್ತಿದೆ. ಒಂದು ಕಡೆ ಕಡಿಮೆಯಾದರೆ ಇನ್ನೊಂದು ಕಡೆ ಶುರುವಾಗಿರುತ್ತದೆ. ಇದೇನಾಗಿರಬಹುದು?’

ಈ ರೀತಿಯ ಪ್ರಶ್ನೆ, ಸಂದೇಹ ಹೊತ್ತು ನನ್ನ ಬಳಿ ಬಂದ ಹುಡುಗನನ್ನು ಪರೀಕ್ಷಿಸಿ ನೋಡಿದಾಗ ಅದು ಗಜಕರ್ಣ ಎಂದು ಗೊತ್ತಾಯಿತು. ಸಾಮಾನ್ಯವಾಗಿ ಬೇಸಿಗೆಯ ಉರಿಬಿಸಿಲಿನ ಸಮಯದಲ್ಲಿ ನಾವು ಹೆಚ್ಚಾಗಿ ಬೆವರುವುದರಿಂದ ಚರ್ಮದ ಮೇಲೆ ಸೋಂಕು ಎದುರಾಗುತ್ತವೆ. ಇತ್ತೀಚೆಗೆ ಹವಾಮಾನ ವೈಪರೀತ್ಯದ ಕಾರಣದಿಂದ ಚಳಿಗಾಲದಲ್ಲಿಯೂ ಬಿಸಿಲು ಹೆಚ್ಚಾಗಿರುವುದರಿಂದ ಇಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಲೇ ಇವೆ. ಆಗಾಗ ತುರಿಕೆ, ದದ್ದುಗಳು, ಗುಳ್ಳೆಗಳು ಇತ್ಯಾದಿ ಚರ್ಮ ಸಂಬಂಧಿತ ತೊಂದರೆಗಳು ಉಂಟಾಗುವುದು ಸಹಜ. ಇವೆಲ್ಲವೂ ಅಂಟು ಜಾಡ್ಯಗಳು. ಫಂಗಸ್‌ಗಳಿಂದ ಬರುವಂಥದ್ದು. ಗಜಕರ್ಣ ಇಂತಹ ಒಂದು ಸಾಮಾನ್ಯ ಶಿಲೀಂಧ್ರ (ಫಂಗಲ್) ಸೋಂಕು. ಇದಕ್ಕೆ ಹುಳುಕಡ್ಡಿ ಎಂದೂ ಕರೆಯುತ್ತೇವೆ.

ಇಂಗ್ಲಿಷಿನಲ್ಲಿ ‘ರಿಂಗ್‌ವರ್ಮ್’ ಎಂಬ ಹೆಸರು ಇದಕ್ಕಿದ್ದರೂ ಇದು ಜಂತು ಅಥವಾ ಹುಳುವಿನಿಂದ ಬರುವ ಕಾಯಿಲೆಯಲ್ಲ. ಇದಕ್ಕೆ ಟೀನಿಯಾ (ಲ್ಯಾಟಿನ್ ಹೆಸರು) ಎಂಬ ಇನ್ನೊಂದು ಹೆಸರೂ ಇದೆ. ಈ ಶಿಲೀಂಧ್ರ ಸೋಂಕು ತಗುಲಿದಾಗ ಉಬ್ಬಾದ ಅಂಟು ಹೊಂದಿರುವ ದುಂಡಗಿನ ಆಕಾರದ ದದ್ದು ಅಥವಾ ಗುಳ್ಳೆ ಚರ್ಮದ ಮೇಲೆ ಕಾಣಿಸಿಕೊಳ್ಳುತ್ತದೆ. ಇದು ಕಡಿತವನ್ನು ಉಂಟು ಮಾಡುತ್ತದೆ. ದೇಹದ ಯಾವುದೇ ಭಾಗದಲ್ಲಿಯಾದರೂ ಚರ್ಮ ಪದರ ಪದರವಾಗಿ ಏಳುವಂತೆ ಮಾಡಬಹುದು. ಈ ಫಂಗಸ್ ಉಗುರು, ಕೂದಲನ್ನು ಒಳಗೊಂಡ ಸತ್ತ ಚರ್ಮದ ಅಂಗಾಂಶಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಪಾದ, ತೊಡೆ ಸಂದು, ಕಂಕುಳು ಮತ್ತು ತೋಳುಗಳ ಮೇಲೆ ಕಾಣಿಸಿಕೊಳ್ಳುತ್ತದೆ. ತಲೆಯಲ್ಲಿ ಗಜಕರ್ಣ ಕಾಣಿಸಿಕೊಂಡಾಗ ಕೂದಲು ಉದುರುತ್ತದೆ. ಕಾಲಿನಲ್ಲಿ ಗಜಕರ್ಣ ಪ್ರಭಾವ ತೋರಿದಾಗ ತುಂಬಾ ಕಡಿತ ಬರುತ್ತದೆ. ಕಾಲು ಬೆರಳುಗಳ ಮಧ್ಯೆ ಚರ್ಮ ಬಿರುಕು ಬಿಟ್ಟುಕೊಳ್ಳುತ್ತದೆ. ಈ ಸೋಂಕು ಉಗುರಿನಲ್ಲಿಯೂ ಕಾಣಿಸಿಕೊಳ್ಳಬಹುದು.

ಗಜಕರ್ಣ ಕಿರಿಯರು ಹಿರಿಯರೆನ್ನದೇ ಎಲ್ಲರಲ್ಲೂ ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ಇದು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದು ಡರ್ಮಟೋಫೈಟ್ಸ್ ಎಂಬ ಹೆಸರಿನ ಚರ್ಮದ ಫಂಗಸ್ಸಿನಿಂದ ಬರುತ್ತದೆ. ಈ ಫಂಗಸ್ ದೇಹದ ಒಳಭಾಗಕ್ಕೆ ಪ್ರವೇಶಿಸುವುದಿಲ್ಲ. ಹೊರಗೇ ಸಾಕು ಸಾಕು ಎನ್ನಿಸುವಷ್ಟು ತೊಂದರೆ ಕೊಡುತ್ತದೆ. ಸೋಂಕುಪೀಡಿತರ ಚರ್ಮದ ಮೇಲಿನ ಗುಳ್ಳೆಯನ್ನು ಸ್ಪರ್ಶಿಸಿ ಅಥವಾ ತುರಿಸಿಕೊಂಡಾಗ, ಫಂಗಸ್ ಚರ್ಮಕ್ಕೆ ಅಂಟಿಕೊಂಡು ಅಥವಾ ಉಗುರಿನ ಒಳಗೆ ಪ್ರವೇಶ ಪಡೆದು ಆ ವ್ಯಕ್ತಿ ಇನ್ನೊಬ್ಬರನ್ನು ಮುಟ್ಟಿದಾಗ ಸೋಂಕು ಮತ್ತೊಬ್ಬರಿಗೆ ಹರಡುತ್ತದೆ. ಹಾಗೆಯೇ ಒಬ್ಬರ ಬಾಚಣಿಗೆಯನ್ನು ಇನ್ನೊಬ್ಬರು